CC No.719-19

<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಲಕ್ಷ್ಮೇಶ್ವರ</u>

ಚಾಸಾಃ 1 ಫ್ರಾಸಾಃ 1

| | | |
|---|---|---|
| ಸಾಕ್ಷಿಯ ಹೆಸರು | : | ರಾಜೇಸಾಬ ತಂದೆ ಲಾಡಸಾಬ ಉರ್ಫ ದೊಡ್ಡಲಾಡಸಾಬ ಹಾಲಗಿ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಿಳಾಸ | : | ಸೂರಣಗಿ |

<u>ದಿನಾಂಕಃ **29.03.2025** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ- ಮಾನ್ಯ ಸಸಅ ರವರಿಂದ</u>

ಚಾಸಾ-1 ರಿಂದ 5 ರವರ ಪರಿಚಯ ನನಗೆ ಇರುತ್ತದೆ.

ನನಗೆ ಸಂಬಂಧಿಸಿದ ಹೊಲವನ್ನು 1, 2 ಮತ್ತು 4 ನೇ ಆರೋಪಿತರು ಒಬ್ಬರಿಗೊಬ್ಬರು ಮಿಲಾಪಿಯಾಗಿ ನಾನು ಸತ್ತಿರುವುದಾಗಿ ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತಾರೆ. ನಾನು ನನಗೆ ಸಂಬಂಧಿಸಿದ ಜಮೀನನ್ನು ಸಾಗುವಳಿ ಮಾಡಿಕೊಂಡು ಬಂದಿರುತ್ತೇನೆ. ನಾನು ಹೊಲದಲ್ಲಿ ಉಳುಮೆ ಮಾಡುವಾಗ 1, 2, 4 ಮತ್ತು 5 ನೇ ಆರೋಪಿತರು ಹೊಲದ ಬಳಿ ಬಂದು ನನಗೆ ತೊಂದರೆ ಮಾಡುತ್ತಾರೆ. ನಾನು ದಾಖಲೆಯನ್ನು ನೋಡಿದಾಗ ವಿಚಾರ ತಿಳಿದಿರುತ್ತದೆ.

<u>(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿಯನ್ನು ಮತ್ತು ಹೇಳಿಕೆಯನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಮಾನ್ಯ ಸಸಅ ರವರಿಗೆ ಸದರಿ ಸಾಕ್ಷಿಯನ್ನು ಭಾಗಶಃ ಪಾಟೀ ಸವಾಲು ಮಾಡಲು ಅನುಮತಿ ನೀಡಿಲಾಯಿತು)</u>

<u>ಪಾಟೀ ಸವಾಲು ಮಾನ್ಯ ಸಸಅ ರವರಿಂದ</u>

ಸರ್ವೇ ನಂ.407/2 ಎ/2 ಕ್ಷೇತ್ರ 3 ಎಕರೆ 36 ಗುಂಟೆ ಜಮೀನು ನನ್ನ ಮಾಲೀಕತ್ವದ್ದು ಎಂದರೆ ಸರಿ. ನಾನು ದಾವಣಗೇರೆಯಲ್ಲಿ ವಾಸವಾಗಿದ್ದು, ಸದರಿ ಜಮೀನನ್ನು 1981 ರಲ್ಲಿ ಈರಪ್ಪ ಪುಟ್ಟಪ್ಪ ನೀರಲಗಿ ಇವರಿಂದ ಖರೀದಿ

ಹಿಡಿದಿರುತ್ತೇನೆ ಎಂದರೆ ಸರಿ. ದಿಃ 08.06.2016 ರಂದು ಆರೋಪಿತರು ನಾನು 1974 ರಲ್ಲಿ ಮರಣ ಹೊಂದಿದ್ದಾಗಿ ಸೃಷ್ಟಿಸಿಕೊಂಡಿರುವ ದಾಖಲೆಯನ್ನು ಕಚೇರಿಗೆ ನೀಡಿರುತ್ತಾರೆ ಎಂದರೆ ಸರಿ. ಸದರಿ ಮರಣ ಪ್ರಮಾಣಪತ್ರವನ್ನು ಸೃಷ್ಟಿಸಿಕೊಳ್ಳಲು ಸಿ.ಮಿ.ನಂ.57/2017 ನ್ನು ಲಕ್ಷ್ಮೇಶ್ವರ ನ್ಯಾಯಾಲಯದಲ್ಲಿ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಗ್ರಾಮ ಲೆಕ್ಕಾಧಿಕಾರಿಗಳೊಂದಿಗೆ ಮಿಲಾಪಿಯಾಗಿ ಜಮೀನಿನ ಪಹಣಿ ಪತ್ರಿಕೆಯನ್ನು ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ.

ಸದರಿ ಜಮೀನಿಗೆ ಓ.ಎಸ್.ನಂ.39/2017 ಎಂಬ ಪ್ರಕರಣ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. 1 ಮತ್ತು 2 ನೇ ಆರೋಪಿತರು ಸಹಿಯನ್ನು ಖೊಟ್ಟಿಯಾಗಿ ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸರಿ. ನಾನು ಈ ವಿಚಾರವನ್ನು ತಿಳಿದುಕೊಂಡು ದೂರು ನೀಡಲು ಹೋಗಿದ್ದು, ಪೋಲಿಸರು ದೂರು ಸ್ವೀಕರಿಸಿರುವುದಿಲ್ಲ ಎಂದರೆ ಸರಿ. ತದನಂತರ ವಕೀಲರ ಮುಖಾಂತರ ಖಾಸಗಿ ದೂರು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಖಾಸಗಿ ದೂರನ್ನು ನಿಪಿ.1 ಎಂದು ಗುರುತಿಸಲಾಯಿತು. ಸಾಕ್ಷಿಯ ಹೆಬ್ಬಟ್ಟಿನ ಗುರುತು ಇರುವುದರಿಂದ ಸಹಿಯನ್ನು ಗುರುತಿಸಿರುವುದಿಲ್ಲ. ಸದರಿ ಈ ಮೇಲಿನ ವಿಚಾರದ ಕುರಿತು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ದಿಃ 10.02.2019 ರಂದು ಮಧ್ಯಾಹ್ನ 01.00 ಗಂಟೆಯಿಂದ 02.00 ರವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಸೂರಣಗಿ ಗ್ರಾಮ ಲೆಕ್ಕಾಧಿಕಾರಿಗಳ ಕಚೇರಿಯಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆಯನ್ನು ನಿಪಿ.2 ಎಂದು ಗುರುತಿಸಲಾಯಿತು. ಸಾಕ್ಷಿಯ ಹೆಬ್ಬಟ್ಟಿನ ಗುರುತು ಇರುವುದರಿಂದ ಸಹಿಯನ್ನು ಗುರುತಿಸಿರುವುದಿಲ್ಲ. ಸದರಿ ಪಂಚನಾಮೆ ಕಾಲಕ್ಕೆ 2 ಛಾಯಾಚಿತ್ರ ತೆಗೆದಿರುತ್ತಾರೆ ಎಂದರೆ ಸರಿ. ಸದರಿ

ಛಾಯಾಚಿತ್ರಗಳನ್ನು ಕ್ರಮವಾಗಿ ನಿಪಿ.3 ಮತ್ತು ನಿಪಿ.4 ಎಂದು ಗುರುತಿಸಲಾಯಿತು. ನಾನು ಪೋಲಿಸರ ಮುಂದೆ ಹೇಳಿಕೆ ನೀಡುವ ಕಾಲಕ್ಕೆ ನನ್ನ ತಂದೆಯ ಮರಣ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸದರಿ ಮರಣ ಪ್ರಮಾಣಪತ್ರವನ್ನು ನಿಪಿ.5 ಎಂದು ಗುರುತಿಸಲಾಯಿತು. ಸಾಕ್ಷಿಯ ಹೆಬ್ಬಟ್ಟಿನ ಗುರುತು ಇರುವುದರಿಂದ ಸಹಿಯನ್ನು ಗುರುತಿಸಿರುವುದಿಲ್ಲ.

ಆಸ್ತಿ ಸಂಖ್ಯೆ 407/2 ಎ/2 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಗಳನ್ನು ಕ್ರಮವಾಗಿ ನಿಪಿ.6 ಮತ್ತು ನಿಪಿ.7 ಎಂದು ಗುರುತಿಸಲಾಯಿತು. ನನ್ನ ಆಧಾರ ಕಾರ್ಡ, ಪಾನ ಕಾರ್ಡ ಹಾಗೂ ಬ್ಯಾಂಕ ಪಾಸಬುಕ್‌ನ ಪ್ರತಿಯನ್ನು ನೀಡಿರುತ್ತೇನೆ ಎಂದರೆ ಸರಿ. ಅವುಗಳನ್ನು ಕ್ರಮವಾಗಿ ನಿಪಿ.6 ರಿಂದ ನಿಪಿ.10 ಎಂದು ಗುರುತಿಸಲಾಯಿತು.

ನಾನು ನನ್ನ ಖಾಸಗಿ ದೂರಿನ ಜೊತೆ ಆಸ್ತಿಗೆ ಸಂಬಂಧಿಸಿದ ಖರೀದಿ ಪತ್ರ, ಮ್ಯೂಟೇಶನ ಪ್ರತಿ ಹಾಗೂ ಇತರೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ- ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ. ಹೇ. ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಲಕ್ಷ್ಮೇಶ್ವರ.